ಪ್ರತಿಬಿಂಬ
PRATIBIMBA –Multidisciplinary Kannada Research Journal of IIMRD
ISSN: 2582-2284
Vol-5, Special Issue 2, March-April, 2024, Pp. 84-89.
©*IIMRD*, Mysuru
IIMRD JOURNALS
www.iimrd.com

# ಆಧುನಿಕ ಮೈಸೂರಿನ ಅಭಿವೃದ್ಧಿಯಲ್ಲಿ ಆರ್ಥಿಕ ಸಮ್ಮೇಳನಗಳ ಕೊಡುಗೆಗಳು: ಒಂದು ಅಧ್ಯಯನ

**ಅಂಬರೀಶ ಪಿ.ವಿ**
ಸಂಶೋಧನಾ ವಿದ್ಯಾರ್ಥಿ, ಇತಿಹಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

**ಸಾರಾಂಶ: (Abstract)**

*ಭಾರತದ ಇತಿಹಾಸ ಪುಟಗಳಲ್ಲಿ ಮೈಸೂರು ಸಂಸ್ಥಾನವು ಪ್ರಮುಖವಾದ ಸ್ಥಾನವನ್ನು ಪಡೆದಿದೆ. ಸಂಸ್ಥಾನದ ಅಭಿವೃದ್ಧಿಯಲ್ಲಿ ಆರ್ಥಿಕ ಸಮ್ಮೇಳನಗಳು ವಿಶೇಷವಾದ ಪಾತ್ರ ವಹಿಸಿವೆ. ಮೈಸೂರಿನಲ್ಲಿ ಶಿಕ್ಷಣ, ಕೃಷಿ, ಕೈಗಾರಿಕಾ ಮತ್ತು ವಾಣಿಜ್ಯ ಸಮ್ಮೇಳನಗಳು ಜರುಗಿವೆ. ಈ ಸಮ್ಮೇಳನಗಳು 1911 ಜೂನ್ ತಿಂಗಳಲ್ಲಿ ಪ್ರಾರಂಭವಾದವು. ಈ ಸಮ್ಮೇಳಗಳು ಮೈಸೂರಿನ ಸರ್ವಾಂಗೀಣ ಪ್ರಗತಿಗೆ ಸಹಾಯಕವಾಗಿವೆ. ಪ್ರಮುಖವಾಗಿ ಮೈಸೂರು ಸಂಸ್ಥಾನದಲ್ಲಿ ಶೈಕ್ಷಣಿಕ, ಕೃಷಿ, ಕೈಗಾರಿಕೆ ಮತ್ತು ವಾಣಿಜ್ಯ ಸಮ್ಮೇಳನಗಳು ನಡೆಯುತ್ತಿದ್ದವು.*

**ಮುಖ್ಯಪದಗಳು (Keywords):** ಮೈಸೂರು ಸಂಸ್ಥಾನ, ನಾಲ್ವಡಿ ಕೃಷ್ಣರಾಜ ಒಡೆಯರ್, ಆರ್ಥಿಕ ಸಮ್ಮೇಳಗಳು ಮತ್ತು ಅಭಿವೃದ್ಧಿ.

**ಪೀಠಿಕೆ**

ಭಾರತದ ಚರಿತ್ರೆಯಲ್ಲಿ ಮೈಸೂರು ಸಂಸ್ಥಾನ ವಿಶೇಷ ಸ್ಥಾನ ಪಡೆದಿದೆ. ಏಕೆಂದರೆ ಮೈಸೂರಿನ ಸಮಗ್ರ ಇತಿಹಾಸ ರಚನೆಗೆ ಹೇರಳವಾದ ಆಧಾರಗಳು ಲಭ್ಯವಿದೆ. ಮೈಸೂರಿನ ಅರಮನೆಯಲ್ಲಿ ದೊರೆಯುವ ವಿಪುಲ ದಾಖಲೆಗಳು ಶಾಸನಗಳು, ಸಾಹಿತ್ಯ ಮೂಲ, ಮಹಾರಾಜರ ಭಾಷಣಗಳು, ದಿವಾನರ ಭಾಷಣಗಳು, ಮೈಸೂರು ಆಡಳಿತ ವರದಿಗಳು ಲಭ್ಯವಿವೆ. ಇವುಗಳ ಮೂಲಕ ಕರ್ನಾಟಕದ ಚರಿತ್ರೆಯನ್ನು ಅರಿಯಲು ಸಾಧ್ಯವಾಗುತ್ತದೆ. ಇವುಗಳಿಂದ ಆಧುನಿಕ ಮೈಸೂರಿನ ಅಭಿವೃದ್ಧಿಗಾದ ಅನುಕೂಲಗಳನ್ನು ತಿಳಿದುಕೊಳ್ಳಲು ಸಹಕಾರಿಯಾಗಿವೆ.

ಮೈಸೂರಿನ ಆರ್ಥಿಕ ಸಮ್ಮೇಳನಗಳು 1911 ಜೂನ್ ತಿಂಗಳನಲ್ಲಿ ಆನಂದ್‌ರಾವ್‌ರವರು ದಿವಾನರಾಗಿದ್ದ ಕಾಲದಲ್ಲಿ ಪ್ರಾರಂಭವಾಯಿತು[1]. ಆರ್ಥಿಕ ಮಂಡಳಿಗಳನ್ನು ಶಿಕ್ಷಣ ಮಂಡಳಿ, ಕೃಷಿ ಮಂಡಳಿ,

[1] .ಚಿನ್ನಸ್ವಾಮಿ ಸೋಸಲೆ ಎನ್. (2013). *ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದ ಮೈಸೂರು ಸಂಸ್ಥಾನದಲ್ಲಿ ದಲಿತರು.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಪು.ಸಂ. 125.

*Please cite this article as:* *ಅಂಬರೀಶ ಪಿ.ವಿ.* (2024). ಆಧುನಿಕ ಮೈಸೂರಿನ ಅಭಿವೃದ್ಧಿಯಲ್ಲಿ ಆರ್ಥಿಕ ಸಮ್ಮೇಳನಗಳ ಕೊಡುಗೆಗಳು: ಒಂದು ಅಧ್ಯಯನ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, ಸಂಪುಟ–5, ವಿಶೇಷ ಸಂಚಿಕೆ–2. ಪು.ಸಂ. 84–89.*

ವಾಣಿಜ್ಯ ಮತ್ತು ಕೈಗಾರಿಕಾ ಮಂಡಳಿ ಎಂಬುದಾಗಿ ವಿಭಾಗಿಸಬಹುದು. ಈ ಸಮ್ಮೇಳನಗಳು/ಮಂಡಳಿಗಳು ಸಾಮಾನ್ಯವಾಗಿ ದಿವಾನರ ಅಧ್ಯಕ್ಷತೆಯಲ್ಲಿ, ಮಹಾರಾಜರ ಜನ್ಮ ದಿನಾಚರಣೆಯ ಸಂದರ್ಭದಲ್ಲಿ ನಡೆಯುತಿತ್ತು. ಕೇಂದ್ರೀಯ ಮಂಡಳಿಗಳು ಮಾಡಿದ ಶಿಫಾರಸುಗಳನ್ನು ಮತ್ತು ಜಿಲ್ಲಾ ಮಂಡಳಿಗಳು ಮಾಡಿದ ಅಭಿವೃದ್ಧಿ ಕೆಲಸಗಳ ವರದಿಗಳನ್ನು ಪರಿಗಣಿಸಲು ವರ್ಷದಲ್ಲಿ ಒಂದು ಬಾರಿ ಸಭೆ ನಡೆಸಲಾಗುತ್ತಿತ್ತು. ಈ ಸಭೆಯಲ್ಲಿ ಹೆಚ್ಚಿನ ಸದಸ್ಯರ ಬೆಂಬಲ ಇರುವಂತಹ ನಿರ್ಣಯಗಳನ್ನು ತೆಗೆದುಕೊಂಡು ಮಹಾರಾಜರ ಮೂಲಕ ಸರ್ಕಾರಕ್ಕೆ ಸಲ್ಲಿಸಲಾಗುತ್ತಿತ್ತು.

ಮಹಾರಾಜರು ಸಮ್ಮೇಳನದ ಉದ್ಘಾಟನಾ ಭಾಷಣದಲ್ಲಿ ‘ಈ ರಾಜ್ಯದ ಆರ್ಥಿಕ ಪ್ರಗತಿಯ ಮೇಲೆ ಪರಿಣಾಮ ಬೀರುವ ಅಂಶಗಳನ್ನು ಪ್ರಗತಿಪರ ದೇಶಗಳ ಜೊತೆಗೆ ಹೋಲಿಸಬೇಕು ಮತ್ತು ಹೋಲಿಕೆಯಿಂದ ಪಡೆದ ಪಾಠಗಳನ್ನು ಜನರಿಗೆ ಪರಿಚಯವಾಗುವ ರೀತಿ ಪ್ರಚಾರ ಮಾಡಬೇಕು ಅದರ ಮೂಲಕ ನಾಯಕತ್ವ ಮತ್ತು ಬುದ್ಧಿವಂತ ವಿದ್ಯಾವಂತ ಉದಯವಾಗುತ್ತದೆ ಎಂದು ಹೇಳಿದರು[2]. ಈ ಮಂಡಳಿಗಳ ವಿಷಯಗಳ ಬಗ್ಗೆ ಆಸಕ್ತಿ ಹೊಂದಿರುವ ಎಲ್ಲರಿಗೂ ತಮ್ಮ ಅಭಿಪ್ರಾಯ ಹೇಳುವ ಅವಕಾಶವಿತ್ತು. ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸುಧಾರಣೆಗೆ ಅಗತ್ಯವಿರುವ ವಿಷಯದ ತಿಳಿಸಿದರೆ ಅದನ್ನು ಸಂಬಂಧಪಟ್ಟ ಅಧಿಕಾರಿಗೆ ರವಾನಿಸಿ ಕ್ರಮಕೈಗೊಳ್ಳುತ್ತಿದ್ದರು.

**ಶಿಕ್ಷಣ ಮಂಡಳಿ**

ಸಾಮಾಜಿಕ ವ್ಯವಸ್ಥೆಯಲ್ಲಿ ಶಿಕ್ಷಣದ ಮೂಲಕ ಯಾವುದೇ ರೀತಿಯ ಬದಲಾವಣೆ ತರಬಹುದು ಎಂಬುದನ್ನು ಅರಿತು ವಿದ್ಯೆಗೆ ಹೆಚ್ಚು ಆದ್ಯತೆ ನೀಡಿವ ನಿಟ್ಟಿನಲ್ಲಿ 1913 ರಲ್ಲಿ ಮೈಸೂರು ಸಂಸ್ಥಾನದಲ್ಲಿ ಉಚಿತ ಹಾಗು ಕಡ್ಡಾಯ ಶಿಕ್ಷಣ ಕಾಯ್ದೆಯನ್ನು ಜಾರಿಗೆ ತಂದರು. ಈ ಮೂಲಕ ಸಮಾಜದಲ್ಲಿ ಮೂಢನಂಬಿಕೆಗಳು ಅಂಧಾಚರಣೆಗಳಂತಹ ಪಿಡುಗುಗಳನ್ನು ತೊಡೆದು ಹಾಕುವ ನಿಟ್ಟಿನಲ್ಲಿ ಅನೇಕ ಕಾರ್ಯಕ್ರಮಗಳನ್ನು ಜಾರಿ ಮಾಡಿ ಶಾಲೆಗಳನ್ನು ಸ್ಥಾಪಿಸಿದರು[3]. 1916ರಲ್ಲಿ ಮೈಸೂರು ವಿಶ್ವವಿದ್ಯಾಲಯ, 1915ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು, 1917ರಲ್ಲಿ ಮೈಸೂರಿನ ಮಹಾರಾಣಿ ಕಾಲೇಜು, ಬೆಂಗಳೂರಿನ ಕೃಷ್ಣರಾಜ ಕೈಗಾರಿಕಾ ಶಾಲೆ, 1914ರಲ್ಲಿ ಮೈಸೂರಿನ ನಜರಾಬಾದ್‌ನಲ್ಲಿ ಪಂಚಮ ಬೋರ್ಡಿಂಗ್ ಹೋಂ ಅನ್ನು ಸ್ಥಾಪಿಸಿದರು. ಇದರಿಂದಾಗಿ ಬೆಂಗಳೂರು ಮತ್ತು ಮೈಸೂರಿನ ನಜರ್‌ಬಾದ್‌ನಲ್ಲಿ ಆದಿ ಕರ್ನಾಟಕ ಅನುದಾನಿತ ವಿದ್ಯಾರ್ಥಿ ನಿಲಯ ಸ್ಥಾಪಿಸಿದರು. ಬೆಂಗಳೂರಿನಲ್ಲಿ ಆದಿಜಾಂಬವ ವಿದ್ಯಾರ್ಥಿನಿಲಯದ ಸ್ಥಾಪನೆಯ ಜೊತೆಗೆ 1930ರಲ್ಲಿ ಮೈಸೂರು, ಮಂಡ್ಯ, ಹಾಸನ, ಮಳವಳ್ಳಿ, ಕೆ.ಜಿ.ಎಫ್, ಚಿತ್ರದುರ್ಗ ಮೊದಲಾದ ಸ್ಥಳಗಳಲ್ಲಿ ಸರ್ಕಾರದಿಂದ ಅನುದಾನ ಪಡೆದು ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಿದರು.

ಸಮಾಜದಲ್ಲಿ ವಿವಿಧ ಜಾತಿ, ಧರ್ಮ, ಭಾಷೆ, ವರ್ಣ ಎಲ್ಲಾ ವರ್ಗದವರಿಗೂ ಅನುಕೂಲವಾಗಲಿ ಎಂದು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಶಿಕ್ಷಣ ಮಂಡಳಿ ಮೂಲಕ ಕೈಗೊಳ್ಳಲಾದ

---

[2]. ಹಯವದರಾವ್ ಸಿ. (2011). ಮೈಸೂರು ಗೆಜಿಟಿಯರ್. (ಸಂ:3), ಕರ್ನಾಟಕ ಸರ್ಕಾರ, ಬೆಂಗಳೂರು ವಿಧಾನ ಸೌಧ. ಪು.ಸಂ.01

[3]. ಕುಪ್ಪಸ್ವಾಮಿ ಬಿ. ಕರ್ನಾಟಕದಲ್ಲಿ ಹಿಂದೂಳಿದ ವರ್ಗಗಳ ಹೋರಾಟ, ಪ್ರಸಾರಂಗ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು–1978.ಪುಟ ಸಂ:48,49

ಜನೋಪಯೋಗಿ ಕಾರ್ಯಗಳು ಮೈಸೂರಿನ ಚರಿತ್ರೆಯಲ್ಲಿ ಬಲವಾದ ಸಾಕ್ಷಿಯಾಗಿ ಉಳಿದು ಬಂದಿದೆ[4]. ಶಿಕ್ಷಣಕ್ಕೆ ಸಂಬಂಧಿಸಿದ ವಿಚಾರಗಳನ್ನು ಶಿಕ್ಷಣ ಮಂಡಳಿಯ ಸಲಹೆ ಮೇರೆಗೆ ಅನುಷ್ಠಾನಗೊಳಿಸಲಾಗುತಿತ್ತು.

**ಶಿಕ್ಷಣ ಮಂಡಳಿಯ ಸದಸ್ಯರು**

1. ಇನ್ಸ್ಪೆಕ್ಟರ್ ಆಫ್ ಜನರಲ್ ಎಜುಕೇಶನ್ (ಮಾಜಿ ಅಧಿಕಾರಿ)
2. ಮೈಸೂರು ವಿಶ್ವವಿದ್ಯಾಲಯದ ಸೆನೆಟ್‌ನಿಂದ ಆಯ್ಕೆಯಾದ ಸದಸ್ಯರು
3. ಸರ್ಕಾರದಿಂದ ನಾಮ ನಿರ್ದೇಶನಗೊಂಡ ಪ್ರೌಢಶಾಲಾ ಶಿಕ್ಷಕರ ಪ್ರತಿನಿಧಿ
4. ಬೆಂಗಳೂರಿನ ಮಿಷನರಿ ಶಾಲೆಗಳಿಂದ ಚುನಾಯಿತರಾದ ಪ್ರತಿನಿಧಿಗಳು
5. ಅನುದಾನ ಮತ್ತು ಅನುದಾನರಹಿತ ಖಾಸಗಿ ಶಾಲೆಗಳ ನಾಮನಿರ್ದೇಶಿತ ಪ್ರತಿನಿಧಿ
6. ಸರ್ಕಾರದಿಂದ ಆಯ್ಕೆಯಾದ ಶಿಕ್ಷಣ ಮಹಿಳಾ ಪ್ರತಿನಿಧಿ
7. ವಿಜ್ಞಾನ ಬೋಧನಾ ಕ್ಷೇತ್ರದಿಂದ ನಾಮ ನಿರ್ದೇಶನ ಪಡೆದ ಸರ್ಕಾರದ ಪ್ರತಿನಿಧಿ
8. ಕೈಗಾರಿಕಾ ಮತ್ತು ತಾಂತ್ರಿಕ ಶಿಕ್ಷಣದ ಸರ್ಕಾರದ ಪ್ರತಿನಿಧಿ
9. ಸರ್ಕಾರದಿಂದ ಆಯ್ಕೆಯಾದ ದೈಹಿಕ ಶಿಕ್ಷಣ ನಿರ್ದೇಶಿಕರು
10. ಸರ್ಕಾರದಿಂದ ನಾಮ ನಿರ್ದೇಶನ ಮಾಡಲಾದ ಮುಸ್ಲಿಂ ಶಿಕ್ಷಣದ ನಿರ್ದೇಶಕರು.
11. ಹಿಂದುಳಿದ ವರ್ಗಗಳ ಶಿಕ್ಷಣ ಪ್ರತಿನಿಧಿ.
12. ಖಿನ್ನತೆಯ ಒಳಗಾದ ವರ್ಗಗಳ ಸರ್ಕಾರದ ಸದಸ್ಯ.
13. ಸರ್ಕಾರದಿಂದ ನಾಮ ನಿರ್ದೇಶನರಾದ ಪ್ರಾಥಮಿಕ ಶಿಕ್ಷಣ ಮಂಡಳಿ ಪ್ರತಿನಿಧಿ.
14. ಪ್ರಜಾಪ್ರತಿನಿಧಿ ಸಭೆಯ ಇಬ್ಬರು ಸದಸ್ಯರು
15. ಸರ್ಕಾರ ಪರವಾಗಿ ಆಯ್ಕೆಯಾದ ಇಬ್ಬರು ಸದಸ್ಯರು

ಹೀಗೆ ಆಯ್ಕೆಯಾದ ಎಲ್ಲಾ ಪ್ರತಿನಿಧಿಗಳಿಗೆ (ಮಂಡಳಿಗೆ) ಮೈಸೂರು ವಿಶ್ವವಿದ್ಯಾಲಯ ಉಪಕುಲಪತಿಗಳು ಅಧ್ಯಕ್ಷರಾಗಿರುತ್ತಿದ್ದರು. ಈ ಮೂಲಕ ಮೈಸೂರು ಸಂಸ್ಥಾನದಲ್ಲಿ ಆಧುನಿಕ ಶಿಕ್ಷಣ ವ್ಯವಸ್ಥೆಯನ್ನು ಜಾರಿ ಮಾಡಿದರು. ಆದ್ದರಿಂದ ಸಾಮಾಜಿಕೆ ಮತ್ತು ಆರ್ಥಿಕ ಅಭಿವೃದ್ಧಿಗೆ ಸಹಾಯಕಾರಿಯಾಯಿತು.

**ಕೃಷಿ ಮಂಡಳಿ.**

ವ್ಯವಸಾಯವು ಭಾರತದ ಪ್ರಮುಖ ಆದಾಯದ ಮೂಲವಾಗಿತ್ತು. ಮೈಸೂರು ರಾಜ್ಯದ ಒಟ್ಟು ಸಾಗುವಳಿ ಪ್ರದೇಶದ 85% ಭೂಪ್ರದೇಶವು ಮಳೆಯಾಶ್ರಿತವಾಗಿತ್ತು. ರಾಜ್ಯದ ಆಹಾರ ಪೂರೈಕೆಯಲ್ಲಿ ಮುಖ್ಯ

[4] ಚಿನ್ನಸ್ವಾಮಿ ಸೋಸಲೆ ಎನ್. (2013). ಪೂರ್ವೋಕ್ತ. ಪು.ಸಂ.106

ಮೂಲವಾಗಿದ್ದರಿಂದ ಕೃಷಿ ಅಭಿವೃದ್ಧಿಗೆ ಹೆಚ್ಚು ಗಮನಹರಿಸಬೇಕಾಗಿತ್ತು. ಕೃಷಿಯಿಂದ ಬೆಳೆಯುತ್ತಿದ್ದ ಭತ್ತ ರಾಗಿ ಜೋಳ ಹಾಗೂ ಇತರೆ ಕೃಷಿ ಬೆಳೆಗಳನ್ನು ಹೆಚ್ಚುವರಿಯಾಗಿ ಬೆಳೆಯಲು ಹಲವಾರು ಯೋಜನೆಗಳನ್ನು ಕೈಗೊಂಡರು. ಬಹುಪಾಲು ಜನರು ನೀರಿನ ಕೊರತೆಯಿಂದಾಗಿ ವಾಣಿಜ್ಯ ಬೆಳೆಗಳನ್ನು ಬೆಳೆಯಲು ಮುಂದೆ ಬರುತ್ತಿರಲಿಲ್ಲ. ಆದ ಕಾರಣ ನೀರಾವರಿ ಸೌಲಭ್ಯ ಕಲ್ಪಿಸಲು ಆದ್ಯತೆ ನೀಡಿದರು[5]. ಕೃಷ್ಣರಾಜ ಸಾಗರ ಅಣೆಕಟ್ಟು ನಿರ್ಮಾಣದ ಜೊತೆಗೆ ಮಂಡ್ಯ, ಮಳವಳ್ಳಿ ಮತ್ತು ಟಿ. ನರಸೀಪುರ ತಾಲೂಕುಗಳಿಗೆ ನೀರಾವರಿ ಸೌಲಭ್ಯ ವಿಸ್ತರಿಸಲು ವಿಶ್ವೇಶ್ವರಯ್ಯ ನಾಲೆಯನ್ನು ನಿರ್ಮಿಸಲಾಯಿತು. ಇದರಿಂದಾಗಿ ಈ ಭಾಗದ ರೈತರು ತೆಂಗು, ಕಬ್ಬು, ಅಡಿಕೆ ಮೊದಲಾದ ತೋಟಗಾರಿಕೆ ಬೆಳೆಗಳನ್ನು ಬೆಳೆಯಲು ಸಹಕಾರಿಯಾಯಿತು. ಹೀಗೆ ಅನೇಕ ಕೃಷಿಪರ ಯೋಜನೆಗಳನ್ನು ಕೃಷಿಮಂಡಳಿಯ ಮೂಲಕ ಜಾರಿಗೊಳಿಸಿದರು.

**ಕೃಷಿ ಮಂಡಳಿ ಸದಸ್ಯರು**

1. ಕೃಷಿ ನಿರ್ದೇಶಕರು (ಮಾಜಿ ಅಧಿಕಾರಿ)
2. ಮೈಸೂರಿನ ಮುಖ್ಯ ಇಂಜಿನಿಯರ್ (ಮಾಜಿ ಅಧಿಕಾರಿ)
3. ಮೈಸೂರಿನ ಕಂದಾಯ ಆಯುಕ್ತರು
4. ಪಶುಪಾಲನಾ ತಜ್ಞರು
5. ರೇಷ್ಮೆ ಇಲಾಖೆ ಮುಖ್ಯಸ್ಥರು
6. ತೋಟಗಾರಿಕಾ ಇಲಾಖೆ ಮಾಜಿ ನಿರ್ದೇಶಕರು
7. ಸಹಕಾರ ಸಂಘಗಳ ಒಕ್ಕೂಟದ ಮುಖ್ಯಸ್ಥರು
8. ಪ್ರಜಾ ಪ್ರತಿನಿಧಿ ಸಭೆಯ ಇಬ್ಬರ ಸದಸ್ಯರು
9. ಕೃಷಿ ಒಕ್ಕೂಟದ ಚುನಾಯಿತ ಪ್ರತಿನಿಧಿ
10. ಕೃಷಿ ಇಲಾಖೆಯ ಮಾಜಿ ನಿರ್ದೇಶಕರು
11. ಅರಣ್ಯ ಇಲಾಖೆಯ ಮಾಜಿ ಸಂರಕ್ಷಣಾಧಿಕಾರಿ
12. ಸರ್ಕಾರದಿಂದ ಆಯ್ಕೆಯಾದ ಪ್ರಜಾಪ್ರತಿನಿಧಿ ಸಭೆಯ ಇಬ್ಬರು ಸದಸ್ಯರು
13. ಸರ್ಕಾರದ ಜಂಟಿ ನಿರ್ದೇಶಕರು
14. ಕೃಷಿಯಲ್ಲಿತೊಡಗಿರುವಂತಹ ರೈತ ಮುಖಂಡರ ಮೂರು ಪ್ರತಿನಿಧಿಗಳು

ಹೀಗೆ ಕೃಷಿ ಮಂಡಳಿಗೆ ಆಯ್ಕೆಯಾದ ಸದಸ್ಯರು ಸಮಸ್ಯೆಗಳನ್ನು ಬಗೆಹರಿಸಲು ಸಹಕರಿಸುತ್ತಿದರು. ಮೊದಲು ಆಯ್ಕೆಯಾದ ಸದಸ್ಯರು ಮಂಡಳಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಾರೆ. ಈ ಮಂಡಳಿಯು

[5] ಮೀರ್ಜಾ ಇಸ್ಮಾಯಿಲ್ ಭಾಷಣಗಳು. ಸಂ–5. (1997). ಕರ್ನಾಟಕ ಪತ್ರಾಗಾರ ಇಲಾಖೆ, ವಿಧಾನ ಸೌಧ. ಪು.ಸಂ.358

ಕೃಷಿ ಅಭಿವೃದ್ಧಿ, ಕೃಷಿ ಸಾಲ, ಪ್ರವಾಹ, ಕ್ಷಾಮ ಮೊದಲಾದ ರೀತಿಯ ಸಮಸ್ಯೆಗಳನ್ನು ಬಗೆಹರಿಸಲು ಕ್ರಮಕೈಗೊಳ್ಳುತಿತ್ತು. ಈ ಮಂಡಳಿಯು ಕೃಷಿ ವಿಶ್ವವಿದ್ಯಾಲಯ ಸ್ಥಾಪನೆ, ಸಂಶೋಧನಾ ಕೇಂದ್ರಗಳ ಸ್ಥಾಪನೆಯ ಜೊತೆಗೆ ತೋಟಗಾರಿಕೆ, ರೇಷ್ಮೆ, ಹೈನುಗಾರಿಕೆ ಅಭಿವೃದ್ಧಿಗೂ ಕೂಡ ಮಂಡಳಿ ಯೋಜನೆ ರೂಪಿಸಿ ಕೃಷಿ ಮತ್ತು ಕೃಷಿ ಸಂಬಂಧಿತ ಕ್ಷೇತ್ರಗಳ ಅಭಿವೃದ್ಧಿಗೆ ಸಹಕಾರ ನೀಡುತಿತ್ತು.

**ಕೈಗಾರಿಕಾ ಮತ್ತು ವಾಣಿಜ್ಯ ಮಂಡಳಿ**

ಸಂಸ್ಥಾನದಲ್ಲಿ ಕೈಗಾರಿಕಾ ಮತ್ತು ವಾಣಿಜ್ಯ ಅಭಿವೃದ್ಧಿಗಾಗಿ ಕೈಗಾರಿಕೆ ಮತ್ತು ವಾಣಿಜ್ಯ ಮಂಡಳಿಯಿತ್ತು. ಒಂದು ರಾಜ್ಯದ ಅಭಿವೃದ್ಧಿಗೆ ಕೈಗಾರಿಕೆ ಮತ್ತು ವಾಣಿಜ್ಯ ಕ್ಷೇತ್ರಗಳ ಅಭಿವೃದ್ಧಿ ಪ್ರಮುಖವಾಗಿದೆ ಎಂಬುದನ್ನು ಅರಿತಿದ್ದ ನಾಲ್ವಡಿಯವರು ಕೈಗಾರಿಕೆಗಳ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆಯನ್ನು ನೀಡಿದ್ದರು. ಇವರು ಅನೇಕ ಕೈಗಾರಿಕೆಗಳನ್ನು ಸ್ಥಾಪಿಸಿದರು[6]. ಅದರಲ್ಲಿ ಪ್ರಮುಖವಾದ ಕೈಗಾರಿಕೆಗಳೆಂದರೆ ಭದ್ರಾವತಿಯ ಕಬ್ಬಿಣ ಕೈಗಾರಿಕೆ, ಬೆಂಗಳೂರಿನ ಸಾಬೂನು ಕೈಗಾರಿಕೆ, ಮೈಸೂರಿನ ಗಂಧದ ಎಣ್ಣೆ ಕಾರ್ಖಾನೆ, ಶಿವನಸಮುದ್ರ ವಿದ್ಯುತ್ ತಯಾರಿಕ ಘಟಕ ಹೀಗೆ ಹಲವಾರು ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದರ ಮೂಲಕ ರಾಜ್ಯಕ್ಕೆ ಆದಾಯವನ್ನು ಹೆಚ್ಚಿಸಲು ಪ್ರಯತ್ನ ಮಾಡಿದರು. ಇದರಲ್ಲಿ ಅಂದಿನ ದಿವಾನರಾಗಿದ್ದ ಸರ್.ಎಂ.ವಿಶ್ವೇಶ್ವರಯ್ಯವರ ಪಾತ್ರ ಪ್ರಮುಖವಾಗಿತ್ತು. ವ್ಯಾಪಾರ ವಾಣಿಜ್ಯವನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ಲಂಡನ್ನಿನಲ್ಲಿ ಟ್ರೇಡ್ ಕಮಿಷನರ್ ಹುದ್ದೆಯನ್ನು ಸ್ಥಾಪಿಸಿ, ಅನೇಕ ಉದ್ಯಮಿಗಳ ಸಹಾಯ ಪಡೆದು ಮಾರುಕಟ್ಟೆಗಳ ಮುಖಾಂತರ ರಾಜ್ಯದ ವ್ಯಾಪಾರ ಮತ್ತು ವಾಣಿಜ್ಯವನ್ನು ಅಭಿವೃದ್ಧಿಪಡಿಸಲು ಎಲ್ಲಾ ರೀತಿಯ ಪ್ರಯತ್ನವನ್ನು ಈ ಮಾಡುತಿತ್ತು.

**ಕೈಗಾರಿಕಾ ಮತ್ತು ವಾಣಿಜ್ಯ ಮಂಡಳಿಯ ಪರಿಷತ್ತಿನ ಸದಸ್ಯರು.**

1. ಕೈಗಾರಿಕೆ ಮತ್ತು ವಾಣಿಜ್ಯ ನಿರ್ದೇಶಕರು (ಮಾಜಿ ಅಧಿಕಾರಿ)
2. ಭೂ ವಿಜ್ಞಾನದ ನಿರ್ದೇಶಕರು (ಮಾಜಿ ಅಧಿಕಾರಿ)
3. ವನ್ಯಜೀವಿ ಮತ್ತು ಅರಣ್ಯ ಸಂರಕ್ಷಣಾಧಿಕಾರಿ (ಮಾಜಿ ಅಧಿಕಾರಿ.)
4. ಮುಖ್ಯ ಎಲಕ್ಟ್ರಿಕಲ್ ಇಂಜಿನಿಯರ್
5. ಮೈಸೂರು ರೈಲ್ವೆ ಮುಖ್ಯ ಇಂಜಿನಿಯರ್
6. ಪ್ರಜಾ ಪ್ರತಿನಿಧಿ ಸಭೆಯ ಇಬ್ಬರ ಸದಸ್ಯರು
7. ಗಣಿಗಾರಿಕೆಯ ಕಾರ್ಖಾನೆಯ ಕಾರ್ಮಿಕ ಪ್ರತಿನಿಧಿ
8. ಕೈಗಾರಿಕಾ ಕಮಿಟಿ ಅಧ್ಯಕ್ಷರು
9. ಸರ್ಕಾರದಿಂದ ಆಯ್ಕೆಯಾದ ಬ್ಯಾಂಕಿನ ಮುಖ್ಯಸ್ಥರು
10. ಭದ್ರಾವತಿ ಕಬ್ಬಿಣ ಕಾರ್ಖಾನೆ ಮಾಜಿ ನಿರ್ದೇಶಕರು
11. ಕೋಲಾರ್ ಗೋಲ್ಡ್ ಫೀಲ್ಡ್ ಮೈನಿಂಗ್ ಬೋರ್ಡ್ ನಿರ್ದೇಶಕರು ಮತ್ತು ಇಬ್ಬರು ಕಾರ್ಮಿಕ ಪ್ರತಿನಿಧಿಗಳು.

[6] ಸರ್.ಎಂ. ವಿಶ್ವೇಶ್ವರಯ್ಯ : ಭಾಷಣಗಳು (1994). ಕರ್ನಾಟಕ ರಾಜ್ಯ ಪತ್ರಗಾರ ಇಲಾಖೆ. ಪು. ಸಂ. 38,39

12. ಸರ್ಕಾರದಿಂದ ನಾಮ ನಿರ್ದೇಶನಗೊಂಡ ಕೈಗಾರಿಕಾ ಮತ್ತು ವಾಣಿಜ್ಯ ಶಿಕ್ಷಣದ ಪ್ರತಿನಿಧಿ.
13. ಸರ್ಕಾರದಿಂದ ಆಯ್ಕೆಯಾದ ವಿಧಾನ ಪರಿಷತ್ ಸದಸ್ಯರು.

ಹೀಗೆ ಆಯ್ಕೆಯಾದ ಪ್ರತಿನಿಧಿಗಳು ಅತ್ಯಂತ ಹಿರಿಯರು ಮತ್ತು ಅನುಭವಿ ಸದಸ್ಯರು ಈ ಮಂಡಳಿಯ ಅಧ್ಯಕ್ಷರಾಗಿರುತ್ತಾರೆ. ಇದರಿಂದಾಗಿ, ಕೈಗಾರಿಕಾ ಮತ್ತು ವಾಣಿಜ್ಯ ಮಂಡಳಿ ರಾಜ್ಯದ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸಿ ಹಲವಾರು ಯೋಜನೆಗಳನ್ನು ರೂಪಿಸಿ ಕಾಲ ಕಾಲಕ್ಕೆ ರಚಿಸಿದ ಉಪ ಸಮಿತಿಗಳ, ವೈಜ್ಞಾನಿಕ ಸಲಹೆಗಳನ್ನು ಪಡೆದು ಮಂಡಳಿ ಕಾರ್ಯನಿರ್ವಹಿಸಿದೆ.

**ಉಪಸಂಹಾರ**

ಒಟ್ಟಾರೆಯಾಗಿ ಹೇಳುವುದಾದರೆ ಜನರ ಆರ್ಥಿಕ ಜೀವನ ರೂಪಿಸುವಲ್ಲಿ ಆರ್ಥಿಕ ಸಮ್ಮೇಳನಗಳು ಸಹಾಯಕವಾಗಿವೆ. ವಿವಿಧ ಸಮ್ಮೇಳನಗಳ ಮೂಲಕ ಮೈಸೂರು ಸಂಸ್ಥಾನದ ಅರಸರು ಅದರಲ್ಲೂ ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ ಶೈಕ್ಷಣಿಕ, ಕೃಷಿ, ಕೈಗಾರಿಕೆ ಮತ್ತು ವಾಣಿಜ್ಯೋದ್ಯಮ ಕ್ಷೇತ್ರದಲ್ಲಿ ತಂದ ಯೋಜನೆಗಳು ಮತ್ತು ರೂಪಿಸಿದ ನೀತಿನಿಯಮಗಳು ಆಧುನಿಕ ಮೈಸೂರಿಗೆ ತನ್ನದೇಯಾದ ಕೊಡುಗೆ ನೀಡಿದೆ.

**ಆಕರ ಗ್ರಂಥಗಳು**


- ಚಿನ್ನಸ್ವಾಮಿ ಸೋಸಲೆ ಎನ್. (2013). *ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದ ಮೈಸೂರು ಸಂಸ್ಥಾನದಲ್ಲಿ ದಲಿತರು.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಹಯವದರಾವ್ ಸಿ. (2011). *ಮೈಸೂರು ಗೆಜೆಟಿಯರ್.* (ಸಂ.3), ಕರ್ನಾಟಕ ಸರ್ಕಾರ, ಬೆಂಗಳೂರು ವಿಧಾನ ಸೌಧ.
- ಕುಪ್ಪಸ್ವಾಮಿ ಬಿ. (1978). *ಕರ್ನಾಟಕದಲ್ಲಿ ಹಿಂದುಳಿದ ವರ್ಗಗಳ ಹೋರಾಟ.* ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ.
- *ಮೀರ್ಜಾ ಇಸ್ಮಾಯಿಲ್ ಭಾಷಣಗಳು–ಸಂ.5.* (1997). ಕರ್ನಾಟಕ ಪತ್ರಗಾರ ಇಲಾಖೆ, ವಿಧಾನಸೌಧ.
- *ಮೈಸೂರಿನ ಆಡಳಿತಾತ್ಮಕ ವರದಿಗಳು (1880 ರಿಂದ 1930).*
- *ಸರ್.ಎಂ. ವಿಶ್ವೇಶ್ವರಯ್ಯ : ಭಾಷಣಗಳು* (1994). ಕರ್ನಾಟಕ ರಾಜ್ಯ ಪತ್ರಗಾರ ಇಲಾಖೆ.